**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ .**

**ಎಸ್ ಸಿ ನಂ. 107/2016**

ಸಿಡಬ್ಲ್ಯು 4 ಪಿಡಬ್ಲ್ಯು- 3

ದಿನಾಂಕಃ 15.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

| | |
|---|---|
| ಪೂರ್ಣ ಹೆಸರು | : ಸಂಜು ಭರಮಪ್ಪಾ ಸನದಿ |
| ವಯಸ್ಸು | : 45 ವರ್ಷ |
| ಉದ್ಯೋಗ | : ಶೇತ್ಕಿ |
| ವಾಸ ಸ್ಥಳ | : ಕಮತೇನಟ್ಟಿ |

**<u>ಮುಖ್ಯ ವಿಚಾರಣೆಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನನಗೆ ಚಾಸಾ 3 ಮತ್ತು 11 ಗೊತ್ತು. 7-8 ವರ್ಷದ ಹಿಂದೆ ಪೋಲಿಸರು ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ನನ್ನ ಮತ್ತು ಚಾಸಾ 3 ರ ಸಮಕ್ಷಮ ಮೃತ ಬಾಳಕೃಷ್ಣ ಇವರ ಶವ ಪಂನಾಮೆಯನ್ನು ಬೆಳಗ್ಗೆ 11 ರಿಂದ ಮದ್ಯಾಹ್ಣ 12 ರವರೆಗೆ ಮಾಡಿದರು. ಸಾಕ್ಷಿ ಆ ಪಂಚನಾಮೆ ನೋಡಿ ಗುರುತಿಸಿದ್ದು ಸಾಕ್ಷಿ ಸಹಿ ನಿಪಿ 1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಒಂದು ಪೋಟೋ ತೆಗೆದರು. ಸಾಕ್ಷಿ ನಿಪಿ 2 ನ್ನು ನೋಡಿ ಗುರುತಿಸುತ್ತಾರೆ. ಮತ್ತು ಪೋಲಿಸರು ಮತ್ತೇನೂ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ

ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೇಳಿಕೊಂಡಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ

31.12.2014 ರಂದು ಪೋಲಿಸರು ನನ್ನ ಮತ್ತು ಚಾಸಾ 3 ರ ಸಮಕ್ಷಮ ಚಾಸಾ 1 ತೋರಿಸಿದ ಗುನ್ನೆ ಜಾಗೆಯ ಪಂಚನಾಮೆಯನ್ನು ಮದ್ಯಾಹ್ನ 3 ರಿಂದ ಸಂಜೆ 4-15 ರವರೆಗೆ ಮಾಡಿ ಈಗ ತೋರಿಸಿದ ಮುಮಾ.1 ರಿಂದ 16 ನ್ನು ಜಪ್ತಿ ಮಾಡಿ ಅಲ್ಲೇ ನನ್ನ ಸಹಿ ಪಡೆದರು ಅನ್ನುವುದು ಸರಿಯಲ್ಲ. 7-8 ವರ್ಷದ ಹಿಂದೆ ಈಗ ನನಗೆ ತೋರಿಸಿದ ನಿಪಿ 3 ರ ಮೇಲಿರುವ ನ್ನನ ಸಹಿಯನ್ನು ಪೋಲಿಸ ಠಾಣೆಯಲ್ಲಿ ಮಾಡಿದ್ದೇನೆ. ಸಾಕ್ಷಿ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಠಾಣೆಯಲ್ಲಿ ಸಹಿ ಮಾಡಿದ್ದೇನೆಂದು ಆರೋಪಿತರಿಗೆಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಸ ಎನ ಪಿ ವಕೀಲರಿಂದಃ

ಆಸ್ಪತ್ರೆಯಲ್ಲಿ ಶವ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಶವಪಂಚನಾಮೆ ಮೇಲೆ ಪೋಲಿಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅನ್ನುವುದು ಸರಿಯಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.